## ಅಫಜಲಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ಮಂಜೂರಾತಿ

೧೨೬೨. ಶ್ರೀ ಮಾಲೀಕಯ್ಯ ಗುತ್ತೇದಾರ್ (ಅಫಜಲಪುರ).— ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿ ಆರ್.ಎಲ್.ಇ.ಜಿ.ಪಿ. ಯೋಜನೆಯನ್ವಯ ೩೫ ಶಾಲಾ ಕಟ್ಟಡಗಳ ಮಂಜೂರಾತಿಗಾಗಿ ಗುಲ್ಬರ್ಗ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ?

**ಶ್ರೀ ಹೆಚ್. ಜಿ. ಗೋವಿಂದೇಗೌಡ(ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು)**

ಅ) ಬಂದಿದೆ.

ಆ) ೧೯೮೪-೮೫ ಮತ್ತು ೧೯೮೫-೮೬ನೇ ಸಾಲಿನಲ್ಲಿ ಆರ್.ಎಲ್.ಇ.ಜಿ.ಪಿ. ಯೋಜನೆಗೆ ಹಣ ಒದಗಿಸಿಲ್ಲವಾದ್ದರಿಂದ ಕಟ್ಟಡ ನಿರ್ಮಿಸಲು ಸಾಧ್ಯವಾಗಿಲ್ಲ.

## ಧಾರವಾಡದಲ್ಲಿರುವ ಕೃಷಿ ಕಾಲೇಜಿನಲ್ಲಿ 'ಅರಣ್ಯ' ವಿಷಯವನ್ನು ಪ್ರಾರಂಭಿಸುವುದು

೧೩೨೮. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡದಲ್ಲಿರುವ ಕೃಷಿ ಕಾಲೇಜಿನಲ್ಲಿ 'ಅರಣ್ಯ' ವಿಷಯವು ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇಲ್ಲದಿದ್ದಲ್ಲಿ ಅದನ್ನು ಪ್ರಾರಂಭಿಸುವ ಬಗ್ಗೆ ಇರುವ ತೊಂದರೆ ?

**ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ಮಂತ್ರಿಗಳು).—**

ಅ) ಹೌದು. ಕೃಷಿ ಕಾಲೇಜಿನಲ್ಲಿ ಶೈಕ್ಷಣಿಕ ವರ್ಷ ೧೯೮೫-೮೬ ರಿಂದ ನಾಲ್ಕು ವರ್ಷದ ಬಿ.ಎಸ್.ಸಿ. (ಅರಣ್ಯ) ಡಿಪ್ಲೋಮಾ ಕೋರ್ಸನ್ನು ಕೃಷಿ ವಿಶ್ವವಿದ್ಯಾನಿಲಯವು ಪ್ರಾರಂಭಿಸಲು ಸರ್ಕಾರದ ಒಪ್ಪಿಗೆಯನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ತಿಳಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

## ರಾಣೆಬೆನ್ನೂರು ನಗರದಲ್ಲಿ ಪ್ರಾಥಮಿಕ ಶಾಲೆಗಳನ್ನು ಕಟ್ಟಿಸುವುದು

೧೩೦೬. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಣೆಬೆನ್ನೂರು ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ಹಾಗೂ ಈ ಎರಡೂ ಪ್ರದೇಶಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು ?

(ಆ) ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಮಂಜೂರಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ?

(ಇ) ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಮಂಜೂರಾತಿ ಮಾಡಬೇಕಾಗಿರುವ ಶಿಕ್ಷಕರ ಸಂಖ್ಯೆ ಎಷ್ಟು ?

(ಈ) ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಸ್ವಂತ ಕಟ್ಟಡಗಳ ಸಂಖ್ಯೆ ಎಷ್ಟು ? ಬಾಡಿಗೆ ಕಟ್ಟಡಗಳ ಸಂಖ್ಯೆ ಎಷ್ಟು ?

(ಉ) ೧೯೮೫-೮೬ನೇ ಸಾಲಿನ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಬೇಕಾಗಿರುವ ಕೊಠಡಿಗಳ ಸಂಖ್ಯೆ ಎಷ್ಟು ?

(ಊ) ಖಾಲಿ ಇರುವ ಶಿಕ್ಷಕರ ಹುದ್ದೆ ಮತ್ತು ಶಾಲಾ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಜಿ, ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

| | ಪ್ರಾಥಮಿಕ ಶಾಲೆಗಳ ಸಂಖ್ಯೆ | ಶಿಕ್ಷಕರ ಸಂಖ್ಯೆ |
|---|---|---|
| (ಅ) | | |
| ರಾಣೆಬೆನ್ನೂರು ನಗರ | ೧೯ | ೧೬೨ |
| ರಾಣೆಬೆನ್ನೂರು ತಾಲ್ಲೂಕು | ೧೨೭ | ೫೨೧ |
| (ಆ) | ರಾಣೆಬೆನ್ನೂರು ನಗರ | ರಾಣೆಬೆನ್ನೂರು ಗ್ರಾಮಾಂತರ |
| | ಇಲ್ಲ | ೨೪ |
| (ಇ) | ಇಲ್ಲ | — |
| (ಈ) | ಸ್ಟಂತ ೬ | ೧೦೩ |
| | ಬಾಡಿಗೆ ೨೪ | ೨೨ |
| (ಉ) | ಹಿರಿ ಕೊಠಡಿಗಳು (೩೦ ಶಾಲೆಗಳಿಗೆ) | — |

(ಊ) ತಿಲ್ಲಾ ಬಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳ ವೇಪಂಕಾತಿಯಿಂದ ತುಂಬಲಾಗುತ್ತದೆ. ಶಾಲಾ ಕೊಠಡಿಗಳನ್ನು ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

## ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ವಂಂಬಡ್ತಿಯ ಆಜ್ಞೆ

೧೧೨೫. ಶ್ರೀ ಕೆ. ಬಿ. ಕೋಳಿವಾಡ್ (ರಾಣೆಬೆನ್ನೂರು).— ಮಾನ್ಯ ಶಿಕ್ಷಣ ವಂಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರ ಆಜ್ಞೆ ಸಂಖ್ಯೆ ಇ. ಡಿ. ೧೧೯ ಟಿ. ಪಿ. ಯು ೭೩, ದಿನಾಂಕ ೨೩ನೇ ಆಗಸ್ಟ್ ೧೯೭೪ರಲ್ಲಿ ಸ್ನಾತಕೋತ್ತರ ಪದವಿ ಪಡೆದ ಪ್ರೌಢಶಾಲಾ ಶಿಕ್ಷಕರಿಗೆ ಮುಂಬಡ್ತಿಯ ಆಜ್ಞೆ ಹೊರಡಿಸಿರುವುದು ನಿಜವೇ ?

(ಆ) ಹಾಗಿದ್ದಲ್ಲಿ, ಈ ಆಜ್ಞೆ ಇನ್ನೂ ಕಾರ್ಯಾಚರಣೆಯಲ್ಲಿದೆಯೇ ಅಥವಾ ಹಿಂತೆಗೆದುಕೊಳ್ಳಲಾಗಿದೆಯೇ ?

(ಇ) ಹಾಗಿದ್ದಲ್ಲಿ ಈ ಆಜ್ಞೆ ಅನುಷ್ಠಾನದಲ್ಲಿ ಇದ್ದಾಗ್ಯೂ ಸಹ ಸ್ನಾತಕೋತ್ತರ ಪದವಿ ಪಡೆದ ಶಿಕ್ಷಕರಿಗೆ ಮುಂಬಡ್ತಿ ನೀಡದಿರಲು ಕಾರಣಗಳೇನು ?

(ಈ) ಸ್ನಾತಕೋತ್ತರ ಪದವಿ ಪಡೆದ ಶಿಕ್ಷಕರಿಗೆ ಮುಂಬಡ್ತಿ ನೀಡುವುದಕ್ಕೆ ಬದಲಾಗಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬಿರುವುದು ನಿಜವೇ ?

(ಉ) ಹಾಗಿದ್ದಲ್ಲಿ ಕಾರಣಗಳೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ವಂಂತ್ರಿಗಳು).—

(ಅ) ಹೌದು.

(ಆ) ಈ ಆಜ್ಞೆಯಲ್ಲಿದ್ದ ತತ್ವವನ್ನು ಉಳಿಸಿಕೊಂಡು ದರ್ಜೆ ವಂತ್ರ ನೇವಂಕಾತಿ ನಿಯಮಾವಳಿಯನ್ನು ರೂಪಿಸಿ ಬದಲಾಯಿಸಲಾಗಿದೆ.

(ಇ) ದರ್ಜೆ ವಂತ್ರ ನೇವಂಕಾತಿ ನಿಯಂಮಾವಳಿಗಳನ್ವಯ ಮುಂಬಡ್ತಿಯಂನ್ನು ನೀಡಲಾಗುತ್ತಿದೆ.